**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಉತ್ತರ ಕನ್ನಡ, ಕಾರವಾರ**

**ಸೇಷನ್ಸ ಕೇಸ ನಂ. 4/2018**

| | | |
|---|---|---|
| ಫಿರ್ಯಾದಿ | – ವಿರುದ್ಧ – | ಆರೋಪಿ/ಗಳು |
| ಭಟ್ಕಳ ಗ್ರಾಮೀಣ ಪೊಲೀಸ ಠಾಣೆ | | ದಯಾನಂದ ನಾಗಪ್ಪ ಮೊಗೇರ ಮತ್ತು ಇತರರು |

**ದೋಷಾರೋಪಣೆ**

**ಶ್ರೀ ಗಣೇಶ ಬಿ., ಬಿ.ಎಸ್.ಸಿ. ಎಲ್.ಎಲ್.ಎಂ. 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ, ಕಾರವಾರ ಆದ ನಾನು, ಆರೋಪಿತರಾದಃ**

| | |
|---|---|
| ಆರೋಪಿತರು | 1. ದಯಾನಂದ ನಾಗಪ್ಪ ಮೊಗೇರ<br>ಪ್ರಾಯಃ 38 ವರ್ಷ, ವೃತ್ತಿಃ ಮೀನುಗಾರಿಕೆ,<br>ಸಾಕೀನಃ ಅಳ್ವೇಕೋಡಿ, ಶಿರಾಲಿ, ಭಟ್ಕಳ |
| | 2. ದೇವಿದಾಸ ನಾರಾಯಣ ಮೊಗೇರ<br>ಪ್ರಾಯಃ 32 ವರ್ಷ, ವೃತ್ತಿಃ ಮೀನುಗಾರಿಕೆ,<br>ಸಾಕೀನಃ ಅಳ್ವೇಕೋಡಿ, ಶಿರಾಲಿ, ಭಟ್ಕಳ |

**ನಿಮ್ಮ ಮೇಲೆ ಹೋರೆಸುವ ದೋಷಾರೋಪಣೆ ಏನೆಂದರೆಃ**

ದಿನಾಂಕಃ 10–5–2017 ರಂದು ರಾತ್ರಿ 8–00 ಗಂಟೆ ಸುಮಾರಿಗೆ, ಭಟ್ಕಳ ತಾಲೂಕಿನ ಶಿರಾಲಿ ಅಳ್ವೆಕೋಡಿ ಗ್ರಾಮದಲ್ಲಿ, ಆರೋಪಿತರಾದ ನೀವು ಬೋಟ ಮಾರಾಟದ ಹಣದ ವಿಷಯದಲ್ಲಿ ಫಿರ್ಯಾದಿಯ ಮೇಲೆ ಸಿಟ್ಟು ಇಟ್ಟುಕೊಂಡು, ಫಿರ್ಯಾದಿಯವರನ್ನು ಕೊಲೆ ಮಾಡುವ ಉದ್ದೇಶದಿಂದ, ಸದರಿಯವರು ತನ್ನ ಮದುವೆಯ ತಯಾರಿಯಲ್ಲಿದಾಗ, ಅವರ ಮನೆಯ ಕಂಪೌಂಡ ಒಳಗೆ ಬಂದು, ಮನೆಯೊಳಗೆ ಅಕ್ರಮ ಪ್ರವೇಶ ಮಾಡಿದ್ದರಿಂದ, ನೀವುಗಳು ಭಾ.ದಂ.ಸಂ.ಕಲಂ 307, 447 ಮತ್ತು 448 ಸಹವಾಚಕ 34 ರಡಿಯಲ್ಲಿ ಅಪರಾಧ ಮಾಡಿದ್ದೀರಾ ಎಂದು ಆರೋಪಿಸಲಾಗಿರುತ್ತದೆ.

2 ನೇಯದಾಗಿ ಅದೇ ದಿನ, ಅದೇ ಸ್ಥಳ, ಸಮಯದಲ್ಲಿ ಆರೋಪಿಗಳಾದ ನೀವು ಮೇಲ್ಕಂಡ ಅಪರಾಧವನ್ನು ಎಸಗುತ್ತಿದ್ದಾಗ ಮುಂದುವರೆದು, 1 ನೇ ಆರೋಪಿತನಾದ ನೀನು ಫಿರ್ಯಾಯವನ್ನು ಉದ್ದೇಶಿಸಿ, ಏ ಸೂಳಾ ಮಗನೆ ನೀನು ಬದುಕಿದ್ದರೆ ನನಗೆ ಸಮಸ್ಯೆ ನಿನ್ನನು ಮುಗಿಸಿದರೆ ನನ್ನ ಎಲ್ಲಾ ಸಮಸ್ಯೆ ಬಗೆಹರಿಯುತ್ತದೆ ಅಂತಾ ಅವಾಚ್ಯ ಶಬ್ದಗಳಿಂದ

ಬೈಯ್ದಿರುವುದರಿಂದ, ನೀವುಗಳು ಭಾ.ದಂ.ಸಂ.ಕಲಂ 504 ಸಹವಾಚಕ 34 ರಡಿಯಲ್ಲಿ ಅಪರಾಧ ಮಾಡಿದ್ದೀರಾ ಎಂದು ಆರೋಪಿಸಲಾಗಿರುತ್ತದೆ.

3 ನೇಯದಾಗಿ ಅದೇ ದಿನ, ಅದೇ ಸ್ಥಳ, ಸಮಯದಲ್ಲಿ ಆರೋಪಿಗಳಾದ ನೀವು ಮೇಲ್ಕಂಡ ಅಪರಾಧವನ್ನು ಎಸಗುತ್ತಿದ್ದಾಗ ಮುಂದುವರೆದು, 2 ನೇ ಆರೋಪಿಯಾದ ನೀನು 1 ನೇ ಆರೋಪಿತನಿಗೆ ತಡಮಾಡಬೇಡಾ ಅವನಿಗೆ ಚಾಕು ಹಾಕಿ ಮುಗಿಸಿಬಿಡು ಅಂತಾ ಪ್ರಚೋದಿಸಿದ್ದರಿಂದ, ನೀವುಗಳು ಭಾ.ದಂ.ಸಂ.ಕಲಂ 109 ಸಹವಾಚಕ 34 ರಡಿಯಲ್ಲಿ ಅಪರಾಧ ಮಾಡಿದ್ದೀರಾ ಎಂದು ಆರೋಪಿಸಲಾಗಿರುತ್ತದೆ.

4 ನೇಯದಾಗಿ ಅದೇ ದಿನ, ಅದೇ ಸ್ಥಳ, ಸಮಯದಲ್ಲಿ ಆರೋಪಿಗಳಾದ ನೀವು ಮೇಲ್ಕಂಡ ಅಪರಾಧವನ್ನು ಎಸಗುತ್ತಿದ್ದಾಗ ಮುಂದುವರೆದು, 1 ನೇ ಆರೋಪಿಯಾದ ನೀನು ಚಾಕುವನ್ನು ತೆಗೆದು ಫಿರ್ಯಾದಿಯವರನ್ನು ಸಾಯಿಸಲು ಮುಂದಾದಾಗ, ಫಿರ್ಯಾದಿಯವನ್ನು ತಪ್ಪಿಸಲು ಸಾಕ್ಷಿದಾರ 6 ಶ್ರೀನಿವಾಸ ವೆಂಕಟ್ರಮಣ ಮೊಗೇರ ಮುಂದಾದಾಗ, ಸದರಿಯವರ ಬಲಕ್ಕೆ ದಂಡೆಗೆ ಚಾಕು ಚುಚ್ಚಿ ಗಾಯವಾಗಿದ್ದು ಅಲ್ಲದೇ ಫಿರ್ಯಾದಿಯವರ ಎಡಕೈ ಮೊಣಗಂಟಿನ ಹತ್ತಿರ ಕೈ ದಂಡೆಗೆ ಚುಚ್ಚಿದ್ದರಿಂದ, ನೀವುಗಳು ಭಾ.ದಂ.ಸಂ.ಕಲಂ 324 ಸಹವಾಚಕ 34 ರಡಿಯಲ್ಲಿ ಅಪರಾಧ ಮಾಡಿದ್ದೀರಾ ಎಂದು ಆರೋಪಿಸಲಾಗಿರುತ್ತದೆ.

ಕೊನೆಯದಾಗಿ, ಅದೇ ದಿನ, ಅದೇ ಸ್ಥಳ, ಸವಯದಲ್ಲಿ ಆರೋಪಿಗಳಾದ ನೀವು ಮೇಲ್ಕಂಡ ಅಪರಾಧವನ್ನು ಎಸಗುತ್ತಿದ್ದಾಗ ಮುಂದುವರೆದು,, ಫಿರ್ಯಾದಿಯವರು ಬೊಬ್ಬೆ ಹಾಕಿದಾಗ ಚಾಸಾ 4 ಮತ್ತು 5 ನೇಯವರು ರಕ್ಷಣೆಗೆ ಬರುವುದನ್ನು ನೋಡಿ, ಆರೋಪಿತರಾದ ನೀವು ಫಿರ್ಯಾದಿಯವರನ್ನು ಉದ್ದೇಶಿಸಿ, ಈ ದಿವಸ ತಪ್ಪಿಸಿಕೊಂಡಿದ್ದಿಯಾ, ನಿನ್ನನ್ನು ಕೊಲೆ ಮಾಡದೆ ಬಿಡುವುದಿಲ್ಲಾ ಅಂತಾ ಜೀವದ ಬೆದರಿಕೆ ಹಾಕಿದ್ದರಿಂದ, ನೀವುಗಳು ಭಾ.ದಂ.ಸಂ.ಕಲಂ 506 ಸಹವಾಚಕ 34 ರಡಿಯಲ್ಲಿ ಅಪರಾಧ ಮಾಡಿದ್ದೀರಾ ಎಂದು ಆರೋಪಿಸಲಾಗಿರುತ್ತದೆ.

ಈ ಮೇಲ್ಕಂಡ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿರುತ್ತವೆ.

ಆರೋಪಿಗಳಾದ ನೀವು ಮೇಲ್ಕಂಡ ಆರೋಪಗಳಿಗೆ ಇದೇ ನ್ಯಾಯಾಲಯದಲ್ಲಿ, ನನ್ನ ಮುಂದೆ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ.

(ಗಣೇಶ ಬಿ.,)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ

ದಿನಾಂಕಃ 23-06-2022

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಉತ್ತರ ಕನ್ನಡ, ಕಾರವಾರ**

**ಸೇಷನ್ಸ ಕೇಸ ನಂ.** 4/2018

ಫಿರ್ಯಾದಿ – ಸರ್ಕಾರ – ಭಟ್ಕಳ ಗ್ರಾಮೀಣ ಪೋಲಿಸ ಠಾಣೆ

ವಿರುದ್ಧ,

ಆರೋಪಿತರು – ದಯಾನಂದ ನಾಗಪ್ಪ ಮೊಗೇರ ಮತ್ತು
ಇತರರು

**ದೋಷಾರೋಪಣೆ**

| | | |
|---|---|---|
| 1) ಆರೋಪಿಯ ಹೆಸರು | – | ದಯಾನಂದ ನಾಗಪ್ಪ ಮೊಗೇರ |
| ತಂದೆಯ ಹೆಸರು | – | ನಾಗಪ್ಪ ಮೊಗೇರ |
| ವಯಸ್ಸು | – | 38 ವರ್ಷ |
| ಉದ್ಯೋಗ | – | ಮೀನುಗಾರಿಕೆ, |
| ವಾಸ | – | ಸಾಕೀನಃ ಅಳ್ವೇಕೋಡಿ, ಶಿರಾಲಿ, ಭಟ್ಕಳ |

**ಆರೋಪಿಯ ಹೇಳಿಕೆ**

ಪ್ರಶ್ನೆಃ ನಿನ್ನ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿನಗೆ ತಿಳಿಯಿತೆ?
ಉತ್ತರಃ ಅರ್ಥವಾಯಿತು.

ಪ್ರಶ್ನೆಃ ನೀನು ತಪ್ಪು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತೀಯಾ ?
ಉತ್ತರಃ ವಿಚಾರಣೆ ಆಗಬೇಕು.

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕಃ 23-06-2022

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಉತ್ತರ ಕನ್ನಡ, ಕಾರವಾರ**

**ಸೇಷನ್ಸ ಕೇಸ ನಂ.** 4/2018

ಫಿರ್ಯಾದಿ – ಸರ್ಕಾರ – ಭಟ್ಕಳ ಗ್ರಾಮೀಣ ಪೋಲಿಸ ಠಾಣೆ

ವಿರುದ್ಧ,

ಆರೋಪಿತರು – ದಯಾನಂದ ನಾಗಪ್ಪ ಮೊಗೇರ ಮತ್ತು ಇತರರು

**ದೋಷಾರೋಪಣೆ**

| | | |
|---|---|---|
| 2) ಆರೋಪಿಯ ಹೆಸರು | – | ದೇವಿದಾಸ ನಾರಾಯಣ ಮೊಗೇರ |
| ತಂದೆಯ ಹೆಸರು | – | ನಾರಾಯಣ ಮೊಗೇರ |
| ವಯಸ್ಸು | – | 32 ವರ್ಷ |
| ಉದ್ಯೋಗ | – | ಮೀನುಗಾರಿಕೆ, |
| ವಾಸ | – | ಸಾಕೀನಃ ಅಳ್ವೇಕೋಡಿ, ಶಿರಾಲಿ, ಭಟ್ಕಳ |

**ಆರೋಪಿಯ ಹೇಳಿಕೆ**

ಪ್ರಶ್ನೆಃ ನಿನ್ನ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿನಗೆ ತಿಳಿಯಿತೆ?
ಉತ್ತರಃ ಅರ್ಥವಾಯಿತು.

ಪ್ರಶ್ನೆಃ ನೀನು ತಪ್ಪು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತೀಯಾ ?
ಉತ್ತರಃ ವಿಚಾರಣೆ ಆಗಬೇಕು.

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕಃ 23-06-2022

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ